


**ರಾಧೇಶ ತೋಳ್ಪಾಡಿ ಎಸ್**

ಕಲೆ: ಗಣೇಶ ಆಚಾರ್ಯ

# ಮನೆ ನೊಣ ಮತ್ತು ಜೇನು ನೊಣ

**ಮನೆ ನೊಣ**

ಒಂಥರಾ ವಿಚಿತ್ರ ಸೋಂಬೇರಿ
ಮೀಟುತ ಬರುವುದು ತಂಬೂರಿ

ಸುತ್ತುವುದಿಷ್ಟ ಮನೆಯೊಳಗೆ
ಜೂಸಿಗೆ ತಿನಿಸಿಗೆ ಮುತ್ತಲಿಕೆ

ಹಗಲೂ ಇರುಳೂ ಹಲುಬುವುದು
ಸಿಕ್ಕರೆ ಖುಷಿಯಲಿ ಮುಲುಗುವುದು.

ಮನದಲಿ ಏನೋ ಮಣಮಣಿಸಿ
ದಿನ ದಿನ ಹೀಗೇ ಗುಣುಗುಣಿಸಿ.

ಮನೆಯಿಂದಾಚೆ ಹೋಗೋಲ್ಲ
ಇಲ್ಲೇ ಬೆಚ್ಚಗೆ ಇದೆಯಲ್ಲ!

**ಜೇನುನೊಣ**

ಮೈ ಝುಮ್ಮೆನಿಸುವ ಝೇಂಕಾರ
ಗುಂಪಿಗೂ ಸ್ವಂತಕೂ ಓಂಕಾರ!

ಬೆಳೆವವರೊಂದಿಗೆ ಒಡನಾಟ
ಅರಳುವವರೊಟ್ಟಿಗೆ ಕೂಡಾಟ!

'ಹೂವಿನ ತಿಳಿ ಹನಿ ಹೀರಲಿಕೆ
ತಿಳಿಯದು ಯಾಕೆ ಮನುಜನಿಗೆ?

ಮೆಲ್ಲಗೆ ಅಮ್ಮನ ಕೇಳುವುದು
ಕನಿಕರಿಸುತ್ತಾ ಹೇಳುವುದು:

'ಪಾಪ! ಅವನಿಗೆ ಎತ್ತಿಡುವ
ತೊಟ್ಟಿಲ ಪಾಪೂಗಿಟ್ಟಿರುವ!'